ರಾಜ್ಯದಲ್ಲಿ ಉತ್ಪಾದಿಸಲಾಗುತ್ತಿರುವ ವಿದ್ಯುತ್ ಪ್ರಮಾಣ

773(477) ಡಾ : ಪರಮೇಶ್ವರ ಜಿ:(ಕೊರಟಗೆರೆ) ಮಾನ್ಯ ಮುಖ್ಯಮಂತ್ರಿ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಉತ್ಪಾದಿಸಲಾಗುತ್ತಿರುವ ವಿದ್ಯುತ್ ಪ್ರಮಾಣವೆಷ್ಟು; ವಿದ್ಯುತ್ ಕೊರತೆ ಎಷ್ಟು;

ಆ) ಕೊರತೆ ಭರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿ ಎಸ್ ಯಡಿಯೂರಪ್ಪ(ಮುಖ್ಯಮಂತ್ರಿ)

ಅ) ಪ್ರಸಕ್ತ ಸಾಲಿನಲ್ಲಿ (2010–11) ರಾಜ್ಯದ ಅಂತರಿಕ ಉತ್ಪಾದನೆಯೂ ಸೇರಿದಂತೆ ವಿವಿಧ ಮೂಲಗಳಿಂದ ಲಭ್ಯವಾಗುವ ವಿದ್ಯುತ್‌ನ ಪ್ರಮಾಣ ಸುಮಾರು 43,471 ಮಿಲಿಯನ್ ಯೂನಿಟ್‌ಗಳೆಂದು ಅಂದಾಜಿಸಲಾಗಿದೆ. 2010–11ನೇ ಸಾಲಿನಲ್ಲಿ ವಿದ್ಯುತ್ ಕೊರತೆಯ ಪ್ರಮಾಣ ಸುಮಾರು 3,324 ಮಿಲಿಯನ್ ಯೂನಿಟ್‌ಗಳು.

ಆ) ಪ್ರಸ್ತುತ ರಾಜ್ಯವು ಎದುರಿಸುತ್ತಿರುವ ವಿದ್ಯುತ್ ಕೊರತೆಯನ್ನು ಎದುರಿಸಲು ತಾತ್ಕಾಲಿಕ ಕ್ರಮವಾಗಿ ಪ್ರಸಕ್ತ ಸಾಲಿನಲ್ಲಿ (2010–11) ಜೂನ್ 2010 ರವರೆಗೆ 1653.78 ಮಿಲಿಯನ್ ಯೂನಿಟ್ಟುಗಳಷ್ಟು ಹೆಚ್ಚಿನ ದರದ ವಿದ್ಯುತ್ತನ್ನು (Highcost energy) ಖರೀದಿಸಲಾಗಿರುತ್ತದೆ.

ವಿದ್ಯುತ್ ಕೊರತೆಯನ್ನು ಸಂಪೂರ್ಣವಾಗಿ ನೀಗಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಯೋಜಿಸಿದೆ.

ರಾಜ್ಯ ಉನ್ನತ ಮಟ್ಟದ ಅನುಮೋದನಾ ಸಮಿತಿಯು ಒಟ್ಟು 23,000 ಮೆ.ವ್ಯಾ. ಸಾಮರ್ಥ್ಯ 81 ಯೋಜನೆಗಳಿಗೆ ಅನುಮೋದನೆ ನೀಡಿರುತ್ತದೆ.

ಪ್ರಸಕ್ತ ವರ್ಷವಾದ 2010–11 ರಲ್ಲಿ ಒಟ್ಟು 2,520 ಮೆಗಾ ವ್ಯಾಟ್ ಹಾಗೂ ಮಧ್ಯಮಕಾಲಿಕ ಕ್ರಮವಾಗಿ 2011–12, 2012–13 ರ ವರ್ಷಗಳಲ್ಲಿ ಒಟ್ಟು

2,900 ಮೆಗಾವ್ಯಾಟ್ ನಷ್ಟು ಹೆಚ್ಚುವರಿಯಾಗಿ ವಿದ್ಯುತ್ ಉತ್ಪಾದಿಸುವ ಗುರಿಯನ್ನು ಸರ್ಕಾರ ಹೊಂದಿದೆ.

ಅಲ್ಲದೇ, ದೀರ್ಘಕಾಲಿಕ ಕ್ರಮವಾಗಿ ಕರ್ನಾಟಕ ಸರ್ಕಾರವು ಎನ್.ಟಿ.ಪಿ.ಸಿ.ರವರ ಸಹಭಾಗಿತ್ವದಲ್ಲಿ 4,000 ಮೆಗಾವ್ಯಾಟ್ ಸಾಮರ್ಥ್ಯದ ಶಾಖೋತ್ಪನ್ನ ವಿದ್ಯುತ್ ಘಟಕವನ್ನು ಬಿಜಾಪುರ ಜಿಲ್ಲೆಯಲ್ಲಿ ಕುಡುಗಿಯಲ್ಲಿ ಸ್ಥಾಪಿಸಲು ಒಡಂಬಡಿಕೆಗೆ ಸಹಿ ಹಾಕಿದ್ದು, ಪ್ರಾರಂಭಿಕ ಚಟುವಟಿಕೆಗಳು ಈಗ ಪ್ರಗತಿಯಲ್ಲಿವೆ.

ರಾಜ್ಯ ಸರ್ಕಾರ ಸ್ವಾಮ್ಯದ ಪಿ.ಸಿ.ಕೆ.ಎಲ್. ಸಂಸ್ಥೆಯು ರಾಜ್ಯದ ವಿದ್ಯುತ್ ವಿತರಣಾ ಕಂಪನಿಗಳ ಪರವಾಗಿ 1,320 ಮೆಗಾವ್ಯಾಟ್ ಸಾಮರ್ಥ್ಯದ ವಿದ್ಯುತ್ ಉತ್ಪಾದನಾ ಘಟಕಗಳನ್ನು ಘಟಪ್ರಭ, ಬೆಳಗಾಂ ಜಿಲ್ಲೆ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಸ್ಪರ್ಧಾತ್ಮಕ ಬಿಡ್ ಆಧಾರದ ಮೇಲೆ ಸ್ಥಾಪಿಸಲು ಉದ್ದೇಶಿಸಿದೆ ಹಾಗೂ 5 ಮೆಗಾವ್ಯಾಟ್ ವಿದ್ಯುತ್ ಸಾಮರ್ಥ್ಯದ ಘಟಕಗಳನ್ನು ತಾಲ್ಲೂಕುಗಳ ಮಟ್ಟದಲ್ಲಿ ಸ್ಥಾಪಿಸಲು ಬಿಡ್ ಕರೆಯಲಾಗಿದೆ.

ದಾಬೋಲ್–ಬೆಂಗಳೂರು ಉದ್ದೇಶಿತ ಅನಿಲ ಮಾರ್ಗದಲ್ಲಿ 700 ಮೆಗಾವ್ಯಾಟ್ ಸಾಮರ್ಥ್ಯದ ಅನಿಲಾಧಾರಿತ ಮೂರು ವಿದ್ಯುತ್ ಉತ್ಪಾದನಾ ಘಟಕಗಳನ್ನು ಬೆಳಗಾಂ, ದಾವಣಗೆರೆ ಮತ್ತು ಗದಗ ಜಿಲ್ಲೆಗಳಲ್ಲಿ ಸ್ಥಾಪಿಸಲು ಸ್ಪರ್ಧಾತ್ಮಕ ಬಿಡ್ ಕರೆಯಲಾಗಿದೆ.

ಸ್ಪರ್ಧಾತ್ಮಕ ಬಿಡ್ಡಿಂಗ್ ಆಧಾರದ ಮೇಲೆ 2,000 ಮೆಗಾವ್ಯಾಟ್ ಧೀರ್ಘಾವದಿ ವಿದ್ಯುತ್ ಖರೀದಿಗಾಗಿ ಟೆಂಡರ್ ಪ್ರಕ್ರಿಯೆ ಅಂತ್ಯಗೊಳಿಸಲಾಗಿದೆ.

ವಿಶ್ವ ಬಂಡವಾಳ ಹೂಡಿಕೆ ಸಮಾವೇಶದಲ್ಲಿ ಕೆಲವು ಖಾಸಗೀ ಹೂಡಿಕೆದಾರರು ಇಂಧನ ಕ್ಷೇತ್ರದಲ್ಲಿ ಬಂಡವಾಳ ಹೂಡಲು ಆಸಕ್ತಿ ತೋರಿರುತ್ತಾರೆ.